PW -1

ದಿನಾಂಕಃ 18.02.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ -

ಅಪಘಾತವಾದ ಕೂಡಲೇ ನಾನು ಸಿ ಜಿ ಆಸ್ಪತ್ರೆಗೆ ಹೋಗಿದ್ದೆ. ಅಪಘಾತದ ಸಮಯದಲ್ಲಿ ನಾನೇ ಬೈಕು ಚಲಾಯಿಸುತ್ತಿದ್ದೆ ಎಂದರೆ ಸರಿ. ಸಿ ಜಿ ಆಸ್ಪತ್ರೆಯಿಂದ ಎಸ್ ಎಸ್ ಮತ್ತು ಸನ್ ಶೈನ್ ಆಸ್ಪತ್ರೆಗೆ ಹೋಗಿದ್ದೆ. ಎಸ್ ಎಸ್ ಆಸ್ಪತ್ರೆಯಲ್ಲಿ 26.9.2023 ರಿಂದ 4.10.2023 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ ಎಂದರೆ ಸರಿ. ಸದರಿ ಚಿಕಿತ್ಸೆಗೆ ನಾನು ಸ್ಪಂದಿಸಿದ್ದೆ ಎಂದರೆ ಸರಿ. ಡಾಃ ಶಿವಮೂರ್ತಿ ರವರು ಅಲ್ಲಿ ನನಗೆ ಚಿಕಿತ್ಸೆ ನೀಡಿದರು ಎಂದರೆ ಸರಿ. ಸದರಿ ದಾಖಲೆಗಳ ಪ್ರಕಾರ ನನಗೆ ಯಾವುದೇ ಮೂಳೆ ಮುರಿತ ಉಂಟಾಗಿಲ್ಲ ಎಂದರೆ ಸರಿ. ನನಗೆ ಕೇವಲ ಪ್ಲಾಸ್ಟಿಕ್ ಸರ್ಜರಿ ಮಾಡಿರುತ್ತಾರೆ. ನಾನು ಸನ್ ಶೈನ್ ಆಸ್ಪತ್ರೆಗೆ ಚರ್ಮದ ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸೆಗಾಗಿ ಹೋಗಿದ್ದೆ ಎಂದರೆ ಸರಿ. ಸದರಿ ಚಿಕಿತ್ಸೆಗೆ ನಾನು ಸಂಪೂರ್ಣವಾಗಿ ಸ್ಪಂದಿಸಿದ್ದೆ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಕಂಪೂಟರ್ ಬಿಲ್ಲುಗಳನ್ನು ನೀಡುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿದ ಬಿಲ್ಲುಗಳಲ್ಲಿ ಕೆಲವು ಕಂಪ್ಯೂಟರ್ ಬಿಲ್ಲುಗಳು ಇವೆ ಎಂದರೆ ಸರಿ. ನಿಪಿ-10 ಮೆಡಿಕಲ್ ಬಿಲ್ ನಲ್ಲಿ Sl. No. 52 ರಿಂದ 55 ಬಿಲ್ಲುಗಳು ಕೈಬರಹದ ಬಿಲ್ಲುಗಳು ಎಂದರೆ ಸರಿ. ಸನ್ ಶೈನ ಆಸ್ಪತ್ರೆಲ್ಲಿ ಕೇವಲ ಕಂಪೂಟರ್ ಬಿಲ್ಲುಗಳನ್ನು ನೀಡಲಾಗುತ್ತದೆ ನಾನು ಪರಿಹಾರ ಪಡೆಯುವ ಸಲುವಾಗಿ ವೈದ್ಯರೊಂದಿಗೆ ಶಾಮೀಲಾಗಿ ಕೈಬರಹದ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ಅಂಗನ್ಯೂನತಾ ಪ್ರಮಾಣ ಪತ್ರವನ್ನು ಪರಿಹಾರಕ್ಕಾಗಿ ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಪಿ-4 ರಲ್ಲಿ ಎನು ಬರೆಯಾಗಿದೆ ಎಂದು ನನಗೆ ತಿಳಿದಿದೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.
(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ